ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	231
ಸದಸ್ಯರ ಹೆಸರು	ಶ್ರೀ ಚಿದಾನಂದ್ ಎಂ ಗೌಡ
ಉತ್ತರಿಸುವ ದಿನಾಂಕ	17-02-2022
ಉತ್ತರಿಸುವವರು	ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಆದೇಶ ಸಂಖ್ಯೆ:2440-2 MUZ/675-09-4 ದಿನಾಂಕ:24.03.1911ರ ರೀತ್ಯಾ ತುಮಕೂರು ಜಿಲ್ಲಾ ಖಜಾನೆಯಲ್ಲಿ ರೂ.24,000/-ಗಳ ಮೂಲಧನವನ್ನು ಠೇವಣಿಯನ್ನಾಗಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :ಬಂದಿದ್ದಲ್ಲಿ ಆ ಠೇವಣಿಯನ್ನು ಯಾವ ಉದ್ದೇಶಕ್ಕಾಗಿ ಇಡಲಾಗಿತ್ತು.	1. ಸರ್ಕಾರದ ಆದೇಶ ಸಂಖ್ಯೆ:2440-2 MUZ/675-09-4 ದಿನಾಂಕ: 24.03.1911ರ ರೀತ್ಯಾ ತುಮಕೂರು ಜಿಲ್ಲಾ ಖಜಾನೆಯಲ್ಲಿ ರೂ.24,000/-ಗಳ ಮೂಲಧನವನ್ನು ಠೇವಣಿಯನ್ನಾಗಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 2. ಜಿಲ್ಲಾಧಿಕಾರಿಗಳ ವರದಿಯನ್ವಯ ಶ್ರೀ ಕೃಷ್ಣ ರಾಜೇಂದ್ರ ವ್ಯವಸಾಯ ಧರ್ಮ ಪಾಠಶಾಲೆ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿನಿಯೋಗಿಸಲು ಠೇವಣಿ ಇಡಲಾಗಿದೆ.
ಆ)	2022ನೇ ಸಾಲಿನ ವರೆವಿಗೂ ಈ ಠೇವಣಿ ಹಣದ ಬಡ್ಡಿಯನ್ನು ಯಾರು ಯಾವ ಉದ್ದೇಶಕ್ಕೆ ವಿನಿಯೋಗಿಸಿರುತ್ತಾರೆ:	2015ನೇ ಇಸವಿಯ ಹಿಂದಿನ ಸಾಲುಗಳಲ್ಲಿ ಸರ್ಕಾರದಿಂದ ಠೇವಣಿ ಹಣದ ಬಡ್ಡಿಯನ್ನು ಬಿಡುಗಡೆ ಮಾಡುತ್ತಿದ್ದು, ಸದರಿ ಹಣವನ್ನು ಶ್ರೀ ಕೃಷ್ಣರಾಜೇಂದ್ರ ವ್ಯವಸಾಯ ಧರ್ಮ ಪಾಠಶಾಲೆ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದೆ. 2015-16ನೇ ಸಾಲಿನಿಂದ 2022ನೇ ಸಾಲಿನವರೆವಿಗೂ ಈ ಠೇವಣಿ ಹಣದ ಬಡ್ಡಿಯ ಅನುದಾನವನ್ನು ಮೇಲ್ಕಂಡ ಸಂಸ್ಥೆ ಮತ್ತು ಇತರೆ ಸಂಸ್ಥೆಗಳ ಬೇಡಿಕೆಗೆ ಅನುಗುಣವಾಗಿ ಆರ್ಥಿಕ ಇಲಾಖೆಯು ಒದಗಿಸದೇ ಇರುವುದರಿಂದ ಬಡ್ಡಿಯ ಅನುದಾನ ವಿನಿಯೋಗಿಸಲು ಸಾಧ್ಯವಾಗಿರುವುದಿಲ್ಲ.
ಇ)	ಇನ್ನು ಮುಂದಾದರೂ ಸರ್ಕಾರಿ ಆದೇಶ ಸಂಖ್ಯೆ:6436-50A ಮತ್ತು 1,195-15-2 ದಿನಾಂಕ:06.05.1916 ರಂತೆ ಈ ಠೇವಣಿ ಹಣದ ಬಡ್ಡಿಯನ್ನು ಮೂಲ ಉದ್ದೇಶದಂತೆ ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಶ್ರೀ ಕೃಷ್ಣರಾಜೇಂದ್ರ ವ್ಯವಸಾಯ ಧರ್ಮ ಪಾಠಾಶಾಲೆಯ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿನಿಯೋಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?	ಆರ್ಥಿಕ ಇಲಾಖೆಯು ಬೇಡಿಕೆಗೆ ಅನುಗುಣವಾಗಿ ಬಡ್ಡಿ ಅನುದಾನವನ್ನು ಒದಗಿಸಿದ್ದಲ್ಲಿ, ಆದೇಶ ಸಂಖ್ಯೆ: 6436/50 ಮತ್ತು 1,195-15-2 ದಿನಾಂಕ:06-05-1916ರಂತೆ ಈ ಠೇವಣಿ ಹಣದ ಬಡ್ಡಿಯನ್ನು ಮೂಲ ಉದ್ದೇಶದಂತೆ ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಶ್ರೀ ಕೃಷ್ಣರಾಜೇಂದ್ರ ವ್ಯವಸಾಯ ಧರ್ಮ ಪಾಠಾಶಾಲೆಯ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುವುದು.

ಸಂಖ್ಯೆ: ಕಂಇ 11 ಮುಸಪ್ರ 2022

(ಶಶಿಕಲಾ ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು